# ಬಿ. ಆರ್. ಲಕ್ಷ್ಮಣರಾವ್ ಅವರ ಸಾಹಿತ್ಯದ ಒಂದು ಪಕ್ಷಿನೋಟ

**ನಾಗೇಂದ್ರ ಎಚ್. ಗಂಗಾಧರಯ್ಯ,*** **ಸುಮಾ ವೈ.ಎನ್.**** &
**ಅಶ್ವಥ್ ಎಸ್.*****

**DOI: https://doi.org/10.5281/zenodo.21189045**

**ABSTRACT**

ನವ್ಯೋತ್ತರ ಕನ್ನಡ ಕಾವ್ಯದ ಪ್ರಮುಖ ಕವಿ ಬಿ. ಆರ್. ಲಕ್ಷ್ಮಣರಾವ್. ಇವರು ಬೌದ್ಧಿಕ ಸಂಕೀರ್ಣತೆಯಿಂದ ಕಾವ್ಯವನ್ನು ಮುಕ್ತಗೊಳಿಸಿ ಜನಸಾಮಾನ್ಯರಿಗೆ ಹತ್ತಿರವಾಗಿಸಿದವರು. ಮಧ್ಯಮ ವರ್ಗದ ಬದುಕಿನ ವಾಸ್ತವತೆ, ಆಡುಭಾಷೆಯ ಸೊಗಡು, ಪ್ರೇಮದ ಲವಲವಿಕೆ ಮತ್ತು ತೀಕ್ಷ್ಣವಾದ ಹಾಸ್ಯ–ವಿಡಂಬನೆಗಳು ಇವರ ಸಾಹಿತ್ಯದ ಜೀವಾಳ. 'ಗೋಪಿ ಮತ್ತು ಗಾಂಡಲೀನ', 'ಲಿಲ್ಲಿ ಪುಟ್ಟಿಯ ಹಂಬಲ' ಮೊದಲಾದ ಕೃತಿಗಳ ಮೂಲಕ ಇವರು ಕನ್ನಡ ಕಾವ್ಯ ಲೋಕದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಕವಿತೆಗಳಷ್ಟೇ ಅಲ್ಲದೆ, ಸುಗಮ ಸಂಗೀತ ಕ್ಷೇತ್ರದಲ್ಲೂ ಸಿ. ಅಶ್ವತ್ಥ್ ಅವರೊಂದಿಗೆ ಕೈಜೋಡಿಸಿ ಕ್ರಾಂತಿಕಾರಿ ಕೊಡುಗೆ ನೀಡಿದ್ದಾರೆ. ಕಾವ್ಯವನ್ನು ಸಂವಾದದ ಮಾಧ್ಯಮವಾಗಿಸಿದ ಲಕ್ಷ್ಮಣರಾವ್ ಅವರ ಸಾಹಿತ್ಯ ಪಯಣವು ಕನ್ನಡ ಸಾಂಸ್ಕೃತಿಕ ಇತಿಹಾಸದ ಒಂದು ಪ್ರಮುಖ ಭಾಗವಾಗಿದೆ.

**KEYWORDS:** ಬಿ. ಆರ್. ಲಕ್ಷ್ಮಣರಾವ್, ನವ್ಯೋತ್ತರ ಕಾವ್ಯ, ಸುಗಮ ಸಂಗೀತ, ಮಧ್ಯಮ ವರ್ಗದ ಸಂವೇದನೆ, ಹಾಸ್ಯ ಮತ್ತು ವಿಡಂಬನೆ.

* **ನಾಗೇಂದ್ರ ಎಚ್. ಗಂಗಾಧರಯ್ಯ,** ಸಹಾಯಕ ಪ್ರಾಧ್ಯಾಪಕರು, ಸ್ಕೂಲ್ ಆಫ್ ಎಂಜಿನಿಯರಿಂಗ್, ದಯಾನಂದ ಸಾಗರ್ ಯೂನಿವರ್ಸಿಟಿ, ಹಾರೋಹಳ್ಳಿ, ಬೆಂಗಳೂರು ದಕ್ಷಿಣ.

** **ಸುಮಾ ವೈ.ಎನ್.,** ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಜಮಖಂಡಿ.

*** **ಅಶ್ವಥ್ ಎಸ್.,** ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಚಿಂತಾಮಣಿ.

**ಪೀಠಿಕೆ:**

ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ-ಬಂಡಾಯದಂತಹ ವಿವಿಧ ಸಾಹಿತ್ಯಿಕ ಚಳವಳಿಗಳು ಕನ್ನಡ ಮನಸ್ಸುಗಳನ್ನು ಸಂಸ್ಕಾರಗೊಳಿಸಿವೆ. ಈ ಪೈಕಿ ನವ್ಯ ಕಾವ್ಯದ ತೀವ್ರ ಬೌದ್ಧಿಕತೆ, ಅಸ್ಪಷ್ಟತೆ ಮತ್ತು ಗಂಭೀರತೆಯಿಂದ ದಣಿದಿದ್ದ ಕನ್ನಡ ಓದುಗನಿಗೆ ಕಾವ್ಯದ ಮುಖೇನ ಹೊಸದೊಂದು ಆಪ್ತತೆ, ಹಾಸ್ಯ, ವ್ಯಂಗ್ಯ ಮತ್ತು ದೈನಂದಿನ ಬದುಕಿನ ಸರಳತೆಯನ್ನು ಉಣಬಡಿಸಿದ ಪ್ರಮುಖರಲ್ಲಿ ಕವಿ ಬಿ.ಆರ್. ಲಕ್ಷ್ಮಣರಾವ್ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ನವ್ಯೋತ್ತರ ಕಾಲಘಟ್ಟದ ಪ್ರಮುಖ ಕವಿಯಾದ ಇವರು ಕಾವ್ಯವನ್ನು ಬೌದ್ಧಿಕ ಕಸರತ್ತಿನ ಗೂಡಿನಿಂದ ಹೊರತಂದು, ಸಾಮಾನ್ಯ ಮಧ್ಯಮ ವರ್ಗದ ಬದುಕಿನ ಆಶೋತ್ತರಗಳಿಗೆ, ಪ್ರೇಮದ ತಳಮಳಗಳಿಗೆ ಮತ್ತು ಸಾಮಾಜಿಕ ವಿಡಂಬನೆಗೆ ಧ್ವನಿಯಾಗಿಸಿದರು. ಭಾಷೆಯ ಸರಳತೆ, ಲಯಬದ್ಧತೆ ಹಾಗೂ ಆಪ್ತ ಸಂವಹನ ಶೈಲಿಯ ಮೂಲಕ ಇವರು ಕನ್ನಡ ಕಾವ್ಯಲೋಕದಲ್ಲಿ ತಮ್ಮದೇ ವಿಶಿಷ್ಟವಾದ ಮುದ್ರೆಯನ್ನು ಒತ್ತಿದ್ದಾರೆ. ಪ್ರಸ್ತುತ ಲೇಖನವು ಲಕ್ಷ್ಮಣರಾವ್ ಅವರ ಜೀವನದ ಹಾದಿ, ಅವರ ಸಾಹಿತ್ಯಿಕ ಸಂವೇದನೆ, ಪ್ರಮುಖ ಕೃತಿಗಳು ಮತ್ತು ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಅವರು ನೀಡಿದ ಕೊಡುಗೆಗಳ ಸಮಗ್ರ ಪಕ್ಷಿನೋಟವನ್ನು ಒದಗಿಸುತ್ತದೆ.

## 1. ಜನನ, ಬಾಲ್ಯ ಮತ್ತು ಜೀವನದ ಹಾದಿ

ಬಿ. ಆರ್. ಲಕ್ಷ್ಮಣರಾವ್ ಅವರು 1946ರ ಸೆಪ್ಟೆಂಬರ್ 9ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ ಎಂಬ ಗ್ರಾಮದಲ್ಲಿ ರಾಜಾರಾವ್ ಮತ್ತು ವೆಂಕಟಲಕ್ಷ್ಮಮ್ಮ ಅವರ ಮಗನಾಗಿ ಜನಿಸಿದರು. ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಯ ನಿಸರ್ಗದತ್ತ ಪರಿಸರ ಮತ್ತು ಅಲ್ಲಿನ ಸಾಂಸ್ಕೃತಿಕ ಹಿನ್ನೆಲೆ ಲಕ್ಷ್ಮಣರಾವ್ ಅವರ ಬಾಲ್ಯದ ಮೇಲೆ ತೀವ್ರ ಪ್ರಭಾವ ಬೀರಿದವು.

ಲಕ್ಷ್ಮಣರಾವ್ ಅವರ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾಭ್ಯಾಸ ಚಿಂತಾಮಣಿಯಲ್ಲಿ ಮುಗಿಯಿತು. ಮುಂದೆ ರಾಜಾರಾವ್ ಅವರು ದಾವಣಗೆರೆಯ ತಮ್ಮ ತಂಗಿಯ ಮನೆಯಲ್ಲಿ ತಮ್ಮ ಮಗನನ್ನು ಉಳಿಸುತ್ತಾರೆ. ಅಲ್ಲಿನ ಡಿ.ಆರ್.ಎಂ. ಕಾಲೇಜಿನಲ್ಲಿ ವಿಜ್ಞಾನ ವಿಭಾಗಕ್ಕೆ ಸೇರಿ ಪಿ.ಯು.ಸಿ ಮುಗಿಸಿ, ನಂತರ ಅಲ್ಲೇ ಬಿ.ಎಸ್ಸಿ. ಪದವಿಗೆ ಸೇರಿದರು. ಪದವಿಯಲ್ಲಿ ಲಕ್ಷ್ಮಣರಾವ್ ಅವರ ಸಾಹಿತ್ಯಾಭಿರುಚಿ ಗಮನಿಸಿದ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಪ್ರಹ್ಲಾದ್ ರಾವ್ ಅವರ ಸಲಹೆಯಂತೆ 1964ರಲ್ಲಿ ದಾವಣಗೆರೆಯಿಂದ ಬಿ.ಎಸ್ಸಿ. ಪದವಿ ಬಿಟ್ಟು, ಬೆಂಗಳೂರಿಗೆ ಬಂದು, ಸರ್ಕಾರಿ ಕಲಾ ವಿಜ್ಞಾನ (ಗ್ಯಾಸ್) ಕಾಲೇಜಿನಲ್ಲಿ ಬಿ.ಎ. ಸೇರಿ ಆಂಗ್ಲ ಭಾಷೆಯನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡರು. ಆ ಸಮಯದಲ್ಲಿ ಪಿ. ಲಂಕೇಶರು ಗ್ಯಾಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಕೆಲವೇ ದಿನಗಳಲ್ಲಿ ಅವರ ಅನುಯಾಯಿ ಶಿಷ್ಯರಾಗಿ, ಕವಿ ನಿಸಾರ್ ಅಹಮದ್‌ರ ಪರಿಚಯವೂ ಆಯಿತು. ಹೀಗೆ ಲಂಕೇಶ್ ಮತ್ತು ನಿಸಾರ್ ಅಹಮದ್‌ರ ಒಡನಾಟ ಹೆಚ್ಚಾಗತೊಡಗಿ ಕಾವ್ಯ ರಚನೆಯಲ್ಲಿ ಪ್ರಶಂಸೆಯನ್ನು

ಪಡೆದರು. ಕಾವ್ಯದ ಕಡೆಗೆ ಮೊದಲಿನಿಂದಲೂ ಒಲವಿದ್ದ ಲಕ್ಷ್ಮಣರಾವ್ ಅವರಿಗೆ ಈ ಒಡನಾಟವು ಹೆಚ್ಚಿನ ಅವಕಾಶ ಒದಗಿಸಿತು. 1967ರಲ್ಲಿ ಉತ್ತಮ ಅಂಕಗಳೊಂದಿಗೆ ಬಿ.ಎ. ಮುಗಿಸಿ, ಎಂ.ಎ. ಮಾಡಲು ನಿರ್ಧರಿಸಿದಾಗ ತಂದೆಯವರ ನಿರಾಕರಣೆ ಹೆಚ್ಚಾಗಿತ್ತು ಮತ್ತು ತಾಯಿಯವರ ವಾತ್ಸಲ್ಯ, ಪ್ರೀತಿಗಾಗಿ ಉನ್ನತ ವ್ಯಾಸಂಗ ಮಾಡುವ ಆಸೆಯಿದ್ದರೂ ಕೂಡ ಲಕ್ಷ್ಮಣರಾವ್ ಅವರು ಚಿಂತಾಮಣಿಗೆ ಹಿಂದಿರುಗಿದರು.

ಮೊದಲಿಗೆ ಡಿಲಿಜೆನ್ಸ್ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ಅದರೊಂದಿಗೆ ಟುಟೋರಿಯಲ್ ತರಗತಿಗಳನ್ನು ನಡೆಸುತ್ತಾ ಉತ್ತಮ ಶಿಕ್ಷಕರೆಂದು ಗುರುತಿಸಿಕೊಂಡರು. ಜೊತೆಜೊತೆಗೆ ಎಂ.ಎ. ಮತ್ತು ಬಿ.ಎಡ್. ಪದವಿಗಳನ್ನು ಗಳಿಸಿಕೊಂಡರು. ಶಿಕ್ಷಕ ವೃತ್ತಿಯ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡರು. ಶಿಕ್ಷಕ ವೃತ್ತಿಯು ಅವರಿಗೆ ಯುವ ಪೀಳಿಗೆಯ ಮನಃಸ್ಥಿತಿ, ಆಲೋಚನೆಗಳು ಮತ್ತು ಹದಿಹರೆಯದ ಪ್ರೇಮದ ಭಾವನೆಗಳನ್ನು ಹತ್ತಿರದಿಂದ ಗಮನಿಸಲು ನೆರವಾಯಿತು. ಇದು ಮುಂದೆ ಅವರ ಕಾವ್ಯಕ್ಕೆ ದೊಡ್ಡ ಸರಕನ್ನು ಸಹ ಒದಗಿಸಿತು. ಬಿ.ಆರ್ ಲಕ್ಷ್ಮಣರಾವ್ ಅವರು 1968 ರಿಂದ ಇತ್ತೀಚಿನವರೆಗೂ ನಿರಂತರವಾಗಿ ತಮ್ಮನ್ನು ತಾವು ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

## 2. ಸಾಹಿತ್ಯಿಕ ಪ್ರವೇಶ ಮತ್ತು ನವ್ಯೋತ್ತರ ಸಂವೇದನೆ

ತಾವು ಪೂರ್ಣವಾಗಿ ಸಾಹಿತ್ಯದ ಕಡೆ ತಿರುಗಲು ಲಂಕೇಶ್‌ರೇ 'ರೋಲ್ ಮಾಡೆಲ್' ಎಂದು ಸ್ವತಃ ಲಕ್ಷ್ಮಣರಾವ್ ಅವರೇ ಒಪ್ಪಿಕೊಳ್ಳುತ್ತಾರೆ. ಸಾಹಿತಿಗಳ ಒಡನಾಟ, ಭೇಟಿ ಮತ್ತು ಪರಿಚಯದಿಂದಾಗಿ ಅವರಲ್ಲಿ ಸಾಹಿತ್ಯದ ಬಗ್ಗೆ ಒಲವು ಹೆಚ್ಚಾಗಿ ಬೆಳೆಯತೊಡಗಿತು. ತಾವು ಕವಿಯಾಗಿ ಬೆಳೆಯಲು ಇವೇ ಪ್ರೇರಣೆ ಎಂದು ಸ್ವತಃ ಬಿ.ಆರ್.ಎಲ್. ಅವರೇ ಹೇಳಿದ್ದಾರೆ. ಲಂಕೇಶ್‌ರ ಜೊತೆಗೆ ಇವರ ಮೇಲೆ ಪ್ರಭಾವ ಬೀರಿದವರು ವೈ.ಎನ್. ಕೃಷ್ಣಮೂರ್ತಿ (ವೈ.ಎನ್.ಕೆ.), ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಶಾಂತಿನಾಥ ದೇಸಾಯಿ, ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕಂಬಾರ ಇವರೆಲ್ಲರ ಪರಿಚಯದ ಜೊತೆಗೆ ಆತ್ಮೀಯ ಸ್ನೇಹವು ಲಭಿಸುವಂತೆ ಮಾಡಿದರು. ಲಕ್ಷ್ಮಣರಾವ್ ರವರಿಗೆ ಹೆಚ್ಚಿನದಾಗಿ ಸಾಹಿತ್ಯಾಧ್ಯಯನಕ್ಕೆ ಪುಸ್ತಕಗಳನ್ನು ನೀಡಿ ಓದುವ ಮತ್ತು ಬರೆಯುವ ಪ್ರೇರಣೆ ವೈ. ಎನ್.ಕೆ. ಅವರಿಂದ ದೊರೆಯಿತು.

ಲಕ್ಷ್ಮಣರಾವ್ ಅವರು ಸಾಹಿತ್ಯ ರಂಗಕ್ಕೆ ಪ್ರವೇಶಿಸಿದಾಗ ಕನ್ನಡದಲ್ಲಿ ಗೋಪಾಲಕೃಷ್ಣ ಅಡಿಗರು, ಯು.ಆರ್. ಅನಂತಮೂರ್ತಿ, ಬಿ.ಸಿ. ರಾಮಚಂದ್ರ ಶರ್ಮ ಮುಂತಾದವರ ನೇತೃತ್ವದ 'ನವ್ಯ ಚಳವಳಿ' ಉತ್ತುಂಗದಲ್ಲಿತ್ತು. ನವ್ಯ ಕಾವ್ಯವು ಮನುಷ್ಯನ ಅಂತರಂಗದ ಸಂಕೀರ್ಣತೆ, ಅಸ್ತಿತ್ವವಾದ ಹಾಗೂ ಲೈಂಗಿಕ ಪ್ರಜ್ಞೆಯನ್ನು ಗಂಭೀರವಾದ ಕಾವ್ಯ ಪ್ರತಿಮೆಗಳ ಮೂಲಕ ಅಭಿವ್ಯಕ್ತಪಡಿಸುತ್ತಿತ್ತು. ಆದರೆ ಈ ಕಾವ್ಯಸಾಧನೆ ಸಾಮಾನ್ಯ ಓದುಗನಿಗೆ ದುರ್ಗಮವಾಗಿ ಕಾಣಿಸುತ್ತಿತ್ತು. ಇಂತಹ ಸಂದರ್ಭದಲ್ಲಿ ಬಿ.ಆರ್. ಲಕ್ಷ್ಮಣರಾವ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಎಚ್.

ಎಸ್. ವೆಂಕಟೇಶಮೂರ್ತಿ ಮುಂತಾದ ಕವಿಗಳು ನವ್ಯದ ಗಂಭೀರತೆಗೆ ಭಿನ್ನವಾದ ಕಾವ್ಯವನ್ನು ಜನಸಾಮಾನ್ಯರಿಗೆ ಹತ್ತಿರವಾಗಿಸುವ ನವ್ಯೋತ್ತರ ಪಂಥಕ್ಕೆ ನಾಂದಿ ಹಾಡಿದರು. ಇವರು ಕಾವ್ಯಕ್ಕೆ ಗಹನವಾದ ಪೀಠಿಕೆಯನ್ನು ಹಾಕದೆ, ನಿತ್ಯ ಜೀವನದ ಆಡುಭಾಷೆಯನ್ನು, ನಗರ ಹಾಗೂ ಅರೆ-ನಗರ ಸಂಸ್ಕೃತಿಯ ಬಿಕ್ಕಟ್ಟುಗಳನ್ನು ಹಾಸ್ಯದ ಲೇಪನದೊಂದಿಗೆ ಮಂಡಿಸಲು ಆರಂಭಿಸಿದರು. ಲಕ್ಷ್ಮಣರಾವ್ ಅವರು ಕಾವ್ಯವು ಕೇವಲ ಚಿಂತನೆಗೆ ಮಾತ್ರವಲ್ಲ, ಅದು ಓದುಗನ ಜೊತೆ ಸಂಭಾಷಿಸುವ ಮಾಧ್ಯಮವಾಗಬೇಕು ಎಂದು ನಂಬಿದವರು.

### 3. ಲಕ್ಷ್ಮಣರಾವ್ ಅವರ ಕಾವ್ಯಲೋಕದ ಪ್ರಮುಖ ವೈಶಿಷ್ಟ್ಯಗಳು

ಲಕ್ಷ್ಮಣರಾವ್ ಅವರ ಕಾವ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕೆಲವು ಪ್ರಮುಖ ಆಯಾಮಗಳು ಗೋಚರಿಸುತ್ತವೆ:

**ಅ) ಮಧ್ಯಮ ವರ್ಗದ ಬದುಕಿನ ವಾಸ್ತವತೆ ಮತ್ತು ವಿಡಂಬನೆ:**

ಲಕ್ಷ್ಮಣರಾವ್ ಅವರ ಆರಂಭದ ಕವಿತೆಗಳ ವಸ್ತು ಪ್ರಧಾನವಾಗಿ ಯೌವನದ ಜಗತ್ತು. ಅದಕ್ಕೆ ತಕ್ಕಂತೆ ಅದಮ್ಯ ಬಯಕೆ, ಉತ್ಸಾಹ, ಲವಲವಿಕೆ, ಉನ್ಮಾದಗಳು ಇಲ್ಲಿ ಅಭಿವ್ಯಕ್ತಿ ಪಡೆಯುತ್ತಾ ಹೋಗುತ್ತವೆ. ಬಹುತೇಕ ಕವಿತೆಗಳಲ್ಲಿ ಮುಗ್ಧತೆ, ಉನ್ನತವಾದ ನಿಲುವು, ಲವಲವಿಕೆ, ವಿನೋದ ಪ್ರಜ್ಞೆಗಳು ಒಳಗೊಂಡಿರುವುದನ್ನು ಕಾಣಬಹುದು. ಇವರ ಬಹುಪಾಲು ಕವಿತೆಗಳು ಮಧ್ಯಮ ವರ್ಗದ ಜನರ ದೈನಂದಿನ ಬದುಕು, ಅವರ ಸಣ್ಣಪುಟ್ಟ ಆಸೆಗಳು, ನಿರಾಸೆಗಳು, ಆರ್ಥಿಕ ಮುಗ್ಗಟ್ಟುಗಳು ಮತ್ತು ಕಪಟ ನಾಟಕಗಳನ್ನು ಚಿತ್ರಿಸುತ್ತವೆ. ಸಾಮಾಜಿಕ ಜಡತೆ ಮತ್ತು ಸಂಪ್ರದಾಯ ಶರಣತೆಯನ್ನು ಇವರು ತೀಕ್ಷ್ಣವಾಗಿ ವಿಡಂಬಿಸುತ್ತಾರಾದರೂ, ಅದರಲ್ಲಿ ಎಲ್ಲೂ ದ್ವೇಷ ಇರುವುದಿಲ್ಲ, ಬದಲಿಗೆ ಒಂದು ಬಗೆಯ ಅನುಕಂಪ ಮತ್ತು ಸಾರ್ವತ್ರಿಕ ನಗು ಇರುತ್ತದೆ.

**ಆ) ಪ್ರೇಮ ಮತ್ತು ಶೃಂಗಾರದ ಹೊಸ ಆಯಾಮ:**

ಕನ್ನಡ ಕಾವ್ಯದಲ್ಲಿ ಪ್ರೇಮವನ್ನು ದೈವೀಕರಿಸಿದ (ನವೋದಯ) ಅಥವಾ ಕೇವಲ ದೈಹಿಕ ವಾಸನೆಯಾಗಿ ಕಂಡ (ನವ್ಯ ) ಪರಂಪರೆಗೆ ಭಿನ್ನವಾಗಿ, ಲಕ್ಷ್ಮಣರಾವ್ ಪ್ರೇಮದ ವಾಸ್ತವಿಕ ಹಾಗೂ ಲವಲವಿಕೆಯ ಮುಖವನ್ನು ಅನಾವರಣಗೊಳಿಸಿದರು. ಹದಿಹರೆಯದ ಆಕರ್ಷಣೆ, ಪ್ರೇಮ ವೈಫಲ್ಯದ ನಂತರದ ಒಂಟಿತನ, ವಿವಾಹಿತ ಜೀವನದ ಸುಖ-ದುಃಖಗಳು ಇವರ ಕಾವ್ಯದಲ್ಲಿ ಸುಂದರವಾಗಿ ಮೂಡಿಬಂದಿವೆ. ಇವರ 'ಗೋಪಿ ಮತ್ತು ಗಾಂಡಲೀನ' ಮತ್ತು 'ಶಶಿಯ ಮೊರೆ' ಕವಿತೆಗಳು ಇಡೀ ಕನ್ನಡ ಸಾಹಿತ್ಯದಲ್ಲೇ ಪ್ರೇಮ ಮತ್ತು ಮಧ್ಯಮ ವರ್ಗದ ಕಲ್ಪನಾ ಜಗತ್ತನ್ನು ಅನನ್ಯವಾಗಿ ಚಿತ್ರಿಸಿದ ಕಾವ್ಯಗಳಾಗಿವೆ.

**ಇ) ಹಾಸ್ಯ ಮತ್ತು ವ್ಯಂಗ್ಯ:**

ಕನ್ನಡದಲ್ಲಿ ಗಂಭೀರ ಕಾವ್ಯ ಬರೆಯುವವರ ನಡುವೆ ಹಾಸ್ಯ ಮತ್ತು

ವ್ಯಂಗ್ಯವನ್ನು ಕಾವ್ಯದ ಪ್ರಧಾನ ಗುಣವನ್ನಾಗಿಸಿಕೊಂಡ ಕವಿಗಳು ಅಪರೂಪವೆಂದು ಹೇಳಬಹುದು, ಆದರೆ ಲಕ್ಷ್ಮಣರಾವ್ ಆ ಅಪರೂಪದ ಸಾಲಿಗೆ ಸೇರಿದವರು. ಸಮಾಜದ ಕಪಟತನ, ರಾಜಕೀಯ ಭ್ರಷ್ಟಾಚಾರ, ಮನುಷ್ಯನ ಅಹಂಕಾರ ಮುಂತಾದವುಗಳನ್ನು ಇವರು ಹಾಸ್ಯದ ಚಾಟಿ ಬೀಸಿ ತಿದ್ದಲು ಯತ್ನಿಸುತ್ತಾರೆ.

**ಈ) ಭಾಷೆಯ ಸಾಂದರ್ಭಿಕತೆ ಮತ್ತು ಆಡುಗನ್ನಡದ ಬಳಕೆ:**

ಇವರು ಕಾವ್ಯಕ್ಕೆ ಕೇವಲ ಅಚ್ಚಗನ್ನಡದ ಪದಗಳನ್ನಷ್ಟೇ ಬಳಸದೆ, ಇಂದಿನ ತಲೆಮಾರು ಬಳಸುವ ಇಂಗ್ಲಿಷ್ ಪದಗಳನ್ನು (ಉದಾಹರಣೆಗೆ: ಬಸ್, ಬಾಯ್‌ಫ್ರೆಂಡ್, ಥಿಯೇಟರ್, ಹೋಟೆಲ್, ಬೈಟು ಕಾಫಿ, ಕಾಕ್‌ಟೇಲ್, ಜಾಸ್‌ಬಾರ್) ಸಹಜವಾಗಿ ಬಳಸುತ್ತಾರೆ. ಇದು ಕವಿತೆಗೆ ಸಾಂಪ್ರದಾಯಿಕ ಬಾಗಿಲನ್ನು ಮುರಿದು ಆಧುನಿಕ ಜೀವಂತಿಕೆಯನ್ನು ತಂದುಕೊಟ್ಟಿದೆ.

**ಪ್ರಮುಖ ಕೃತಿಗಳ ಪರಿಚಯ ಮತ್ತು ವಿಶ್ಲೇಷಣೆ**

ಬಿ.ಆರ್. ಲಕ್ಷ್ಮಣರಾವ್ ಅವರು ಕನ್ನಡ ಸಾಹಿತ್ಯಕ್ಕೆ ಕವನ ಸಂಕಲನಗಳು, ನಾಟಕಗಳು, ಕಾದಂಬರಿಗಳು ಹಾಗೂ ಅನುವಾದಗಳ ಮೂಲಕ ಶ್ರೀಮಂತ ಕೊಡುಗೆ ನೀಡಿದ್ದಾರೆ. ಲಕ್ಷ್ಮಣರಾವ್ ಅವರ 8 ಕವನ ಸಂಕಲನಗಳು, ಎರಡು ಕಥಾಸಂಗ್ರಹಗಳು, ಎರಡು ಕಾದಂಬರಿಗಳು, ಮೂರು ನಾಟಕಗಳು, ಒಂದು ಪ್ರಬಂಧ ಮಾಲೆ, ಒಂದು ಲೇಖನಗಳ ಸಂಕಲನ, ಒಂದು ಹನಿಗವಿತೆಗಳ ಸಂಕಲನ, ಒಂದು ಭಾವಗೀತೆಗಳ ಸಂಕಲನ, 'ಜೀವಜಲ' ಎಂಬ ಸಮಗ್ರ ಕಾವ್ಯ ಸಂಪುಟದ ಜೊತೆಗೆ ಈವರೆಗಿನ ಪ್ರೇಮ ಕವಿತೆಗಳನ್ನು ಒಳಗೊಂಡ 'ಪ್ರೇಮಾಂತರ' ಎಂಬ ಕವನ ಸಂಕಲನವನ್ನು ಹೊರತಂದಿದ್ದಾರೆ.

**ಅವರ ಪ್ರಮುಖ ಕೆಲವು ಕಾವ್ಯ ಕೃತಿಗಳನ್ನು ಈ ಕೆಳಗಿನಂತೆ ಗುರುತಿಸಬಹುದು:**

**ಗೋಪಿ ಮತ್ತು ಗಾಂಡಲೀನ (1971):** ಅವರ ಪ್ರಾರಂಭದ 29 ಕವಿತೆಗಳು ಇದರಲ್ಲಿವೆ. ಇದರೊಳಗಿನ ಪ್ರಮುಖ ಕವಿತೆಗಳೆಂದರೆ 'ನಾನು', 'ಅಪ್ಪ', 'ಅಮ್ಮ', 'ಗೆಳೆಯರು', 'ಮರ', 'ವಿಜ್ಞಾನ', 'ಗೋಪಿ ಮತ್ತು ಗಾಂಡಲೀನ', 'ಫೋಟೋಗ್ರಾಫರ್', 'ಬಾ', 'ಒಬ್ಬಂಟಿ', 'ಶಶಿಯ ಮೋರೆ' ಮುಂತಾದವುಗಳು. ಈ ಸಂಕಲನದ 'ಮರ' ಮತ್ತು 'ಕೆಲಸ' ಎಂಬವು ಡಿ.ಎಚ್. ಲಾರೆನ್ಸ್ ಮತ್ತು ಜಾಯ್ಸ್ ಕಿಲ್ಮರ್ ಅವರ ಇಂಗ್ಲಿಷ್ ಕವಿತೆಗಳಿಂದ ಅನುವಾದಗೊಂಡವು. ಈ ಸಂಕಲನದಲ್ಲಿ ಪ್ರೀತಿ–ಪ್ರೇಮ, ಪ್ರಣಯದಂಥ ವಸ್ತು ವಿಷಯಗಳಿಗೆ ಸಂಬಂಧಿಸಿದ ಕವಿತೆಗಳಿರುವುದನ್ನು ಗಮನಿಸಬಹುದು.

'ಅಪ್ಪ' ಕವಿತೆ ಸರಳತೆಯ ಮೂಲಕ ಗಂಭೀರ ಮಾರ್ಮಿಕ ಅಂತ್ಯವನ್ನು ಕಾಣುತ್ತದೆ. ತಂದೆ ಮಗನ ವಿಭಿನ್ನ ವ್ಯಕ್ತಿತ್ವವು ಸಾಮಾಜಿಕವಾಗಿ ಗಂಭೀರ ಚಿಂತನೆಗೆ ದೂಡುತ್ತದೆ. 'ಅಮ್ಮ' ಕವಿತೆಯಲ್ಲಿ ತಾಯಿಯ ವಾತ್ಸಲ್ಯಕ್ಕಾಗಿ ತುಡಿಯುವ ಮಗುವಿನ ಚಿತ್ರಣದ ಜೊತೆಗೆ ಮನುಷ್ಯ ಎಷ್ಟೇ ಎತ್ತರಕ್ಕೇರಿದರೂ ತಾಯಿ ಮಡಿಲ ರಕ್ಷಣೆಯು ಅಗತ್ಯವೆನ್ನುವ ಭಾವವನ್ನು ವ್ಯಕ್ತಪಡಿಸುತ್ತದೆ. 'ವಿಜ್ಞಾನ', 'ಹಸಿರು ಹಾವು', 'ಸಖಿಗೀತ'

ಕವಿತೆಗಳು ಕಲೆಗಾರಿಕೆಯ ಮೂಲಕ ಉತ್ತಮವೆನಿಸುತ್ತವೆ. 'ಒಬ್ಬಂಟಿ' ಕವಿತೆಯಲ್ಲಿ ಒಂಟಿ ಮನಸ್ಸಿನ ಭಾವನೆಗಳು, ಮೂಡುವ ಆಲೋಚನೆಗಳು, ಕಾಡುವ ದುಃಸ್ವಪ್ನಗಳ ಚಿತ್ರಣದೊಂದಿಗೆ, ಪ್ರೇಮಿಯ ಮನಸ್ಸಿನ ಚಿತ್ರಣವನ್ನು ಕಾಣಬಹುದು. 'ಗೆಳೆಯರು' ಕವಿತೆಯಲ್ಲಿ ಬದುಕಿನಲ್ಲಿ ಸ್ನೇಹದ ಮಹತ್ವ ಎಷ್ಟೆಂಬುದನ್ನು ತಿಳಿಸುತ್ತಾ ಒಳಿತು–ಕೆಡುಕುಗಳೆರಡರಲ್ಲಿ ಗೆಳೆಯರ ಮಹತ್ವವೇನೆಂಬುದನ್ನು ಕವಿ ತಿಳಿಸಿದ್ದಾರೆ.

**ಟುವಟಾರಾ (1977):** ಈ ಸಂಕಲನವು ನನ್ನೂರು, ಕಿಶೋರನ ಅಶರೀರಗೀತೆ, ಲೋಲಿಟಾ, ಪ್ರೇಮಗೀತೆ, ನಿಂಬೆಗಿಡ, ಉಮಾ v/s ರಮಾ ಎಂಬ ಪ್ರಮುಖ ಕವಿತೆಗಳನ್ನು ಒಳಗೊಂಡಿದೆ. ಇವುಗಳಲ್ಲಿ ಪದ್ಯ–ಗದ್ಯ ಎರಡೂ ಶೈಲಿಯ ಜೊತೆಗೆ ವಾಸ್ತವಿಕತೆ ಮತ್ತು ಆಡು ಮಾತಿನ ಬಳಕೆಯನ್ನು ಕಾಣಬಹುದು. 'ರಗಳೆ' ಎಂಬ ಭಾವಗೀತೆಯು ಸುಗಮ ಸಂಗೀತದಲ್ಲಿ ಜನಪ್ರಿಯತೆ ಗಳಿಸಿ ಹೆಚ್ಚು ಪ್ರಚಾರ ಪಡೆದುಕೊಂಡಿದೆ. ಈ ಸಂಕಲನದಲ್ಲಿ ಬರುವ ಪ್ರಾರ್ಥನೆ, ಆಟಗಳು, ನಿಂಬೆಗಿಡ, ಜುಟ್ಟು ಇವು ಇಂಗ್ಲಿಷ್ ಮೂಲದ ಅನುವಾದಿತ ಗೀತೆಗಳು.

**ಲಿಲ್ಲಿ ಪುಟ್ಟಿಯ ಹಂಬಲ (1981):** ಇದು ಲಕ್ಷ್ಮಣರಾವ್ ಅವರ ಮೂರನೇ ಕವನಸಂಕಲನವಾಗಿದ್ದು 28 ಕವಿತೆಗಳಿವೆ. ಈ ಕವನ ಸಂಕಲನದಲ್ಲಿ ನಿರಕ್ಷರ ಕುಕ್ಷಿಗೆ, ವಾನರಗೀತೆ, ಸಂದಿಗ್ಧ ಸಂವಾದ, ತೂರ್ಯ, ವಿಚಿತ್ರ, ಕೊಲಂಬಸ್, ಯೇಟ್ಸ್ ನೆನಪಿಗಾಗಿ, ಲಿಲ್ಲಿ ಪುಟ್ಟಿಯ ಹಂಬಲ ಕವಿತೆಗಳು ಪ್ರಮುಖವಾಗಿವೆ. ನಮ್ಮ ದೇಶದ ಸ್ಥಿತಿಯೊಂದಿಗೆ ರೈತನ ಸ್ಥಿತಿಯ ಬಗ್ಗೆ ವ್ಯಂಗ್ಯದ ಮೂಲಕ ತಲೆ ತಗ್ಗಿಸುವಂತೆ ಚುಚ್ಚುವ ಭಾವವನ್ನು 'ನಿರಕ್ಷರ ಕುಕ್ಷಿಗೆ' ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ. ಲಿಲ್ಲಿ ಪುಟ್ಟಿಯ ಹಂಬಲ ಕವಿತೆಯಲ್ಲಿ ಬದುಕಿನ ಮುಖ್ಯ ಶಕ್ತಿಯಾದ ಕಾಮದ ತೀವ್ರತೆಯ ಹಂಬಲವಿದೆ. 'ಕೊಲಂಬಸ್' ನಲ್ಲಿ ಪರಂಪರೆಯ ಪ್ರಜ್ಞೆ ಬೆಳೆಸುವುದನ್ನು ಕಾಣಬಹುದು. 'ಯೇಟ್ಸ್ ನೆನಪಿಗಾಗಿ' ಕವಿತೆಯಲ್ಲಿ ಕವಿಯ ಪ್ರೌಢ ಪ್ರತಿಭೆಯನ್ನು ಗುರುತಿಸಬಹುದು. ಬದುಕಿನ ವಾಸ್ತವಗಳಿಗೆ ಎಚ್ಚರಿಕೆ ನೀಡುತ್ತಾ ವಿಚಾರ ಪರರನ್ನಾಗಿ ಮಾಡುವ ಅಂಶಗಳನ್ನು ತಿಳಿಸುತ್ತಾ, ಜೀವನೋತ್ಸಾಹ, ದೈನಂದಿನ ಬದುಕಿನ ಆಗುಹೋಗುಗಳ ಬಗ್ಗೆ ಮಧ್ಯಮ ವರ್ಗದ ದಾಂಪತ್ಯದ ಎಳೆಗಳನ್ನು ಬಿಡಿಸಿ ನೋಡುವ ಹಾಸ್ಯ, ವ್ಯಂಗ್ಯ, ವಿಡಂಬನೆಯ ಅಂಶಗಳನ್ನು ಕಾಣಬಹುದು. ಈ ಸಂಕಲನದಲ್ಲಿ ಬರುವ ಸೈಕಲ್ ಸವಾರಿ, ಚೆಲುವು, ಎರಡು ಪ್ರಶ್ನೆಗಳು, ನಡು ವಯಸ್ಸಿನಲ್ಲಿ, ಯೇಟ್ಸ್ ನೆನಪಿಗಾಗಿ ಕವಿತೆಗಳು ಅನುವಾದಿತ ಕವಿತೆಗಳಾಗಿವೆ.

**ಅಪರಾಧಂಗಳ ಮನ್ನಿಸೊ (1989):** ಈ ಸಂಕಲನದ ಕಾಲಕ್ಕೆ ಕವಿ ತನ್ನ ಕಾವ್ಯಗತಿಯನ್ನು ಬದಲಿಸಿದ್ದಾರೆ ಎಂದು ಹೇಳಬಹುದು. ತುಂಟತನದ ಅಭಿವ್ಯಕ್ತಿಯಿಂದಲೇ ಗಂಭೀರ ವಿಷಯದ ಕಡೆಗಿನ ಅವರ ಒಲವು ಬೆಳೆದಿರುವುದನ್ನು ಗುರುತಿಸಬಹುದು. 'ಏನೀ ಅದ್ಭುತವೇ' ಎಂಬ ಕವಿತೆ ಲಕ್ಷ್ಮಣರಾವ್ ಅವರ ಕಾವ್ಯ ಮನೋಧರ್ಮವನ್ನು ಸಮರ್ಥವಾಗಿ ಪ್ರತಿನಿಧಿಸುತ್ತದೆ. ಇದರಲ್ಲಿ ವ್ಯಕ್ತಿ ಚಿತ್ರಣವಿದೆ. ಬದುಕಿನಲ್ಲಿ ದಕ್ಕುವುದೆಲ್ಲ ಅಂದುಕೊಂಡಷ್ಟು ಸುಲಭವಲ್ಲ ಎಂಬ ಸತ್ಯದ ವಿವರವಿದೆ

ಹಾಗೂ ಹಾಸ್ಯ, ವ್ಯಂಗ್ಯ ವಿಡಂಬನೆಯ ಕವಿತೆಗಳು ಇವೆ. ಕದ್ದಾಲಿಕೆ, ಗಮನ, ಹೆಂಡತಿಯ ಸಂಕಟ, ಬೋಣಿ, ಪ್ರತಿಫಲ ಇವು ಹಾಸ್ಯದ ಹರವಿರುವ ಕವಿತೆಗಳು. ಸ್ವಯಂವರ ಮತ್ತು ಹೊಂಚು ಎಂಬ ವಿಡಂಬನಾ ಕವಿತೆಗಳಲ್ಲಿ ಸಾವಿನ ಬಗೆಗಿನ ಚಿತ್ರಣವಿರುವುದನ್ನು ಕಾಣಬಹುದು.

**ಭಾರತ ಬಿಂದು ರಶ್ಮಿ (1997):** ಇದು ಹನಿಗವಿತೆಗಳ ಸಂಕಲನವಾಗಿದ್ದು, ಈ ಹನಿಗವಿತೆಗಳಲ್ಲಿ ಸಾಹಿತ್ಯದ ಆಯಾಮವನ್ನು ಕಾಣಬಹುದು. ಇದರಲ್ಲಿ ತುಂಟತನ, ವ್ಯಂಗ್ಯ, ವಿನೋದ, ವಿಡಂಬನೆ, ವಿಷಾದ ಎಲ್ಲವನ್ನು ನೋಡಬಹುದು, ಚುರುಕುತನ, ರಸಿಕತೆ, ಭಾವುಕತೆ, ವೈಚಾರಿಕತೆಗಳ ಜೊತೆಗೆ ಕಾವ್ಯಾತ್ಮಕತೆಗಳು ಕಂಡುಬರುತ್ತವೆ. ಘಸ್ಸಿ, ವಿರಹಿ, ಜಾಣ, ಕೂಡು, ವಾರೆಂಟ್, ಚೆಲುವೆ, ತೀರ್ಪು, ಯಾಕೆಂದರೆ ಮೊದಲಾದ ಕವಿತೆಗಳು ವ್ಯಂಗ್ಯ ಮತ್ತು ತೀಕ್ಷ್ಣ ನಿರೂಪಣೆಯಿಂದ ಕೂಡಿವೆ.

## ಸುಗಮ ಸಂಗೀತ ಲೋಕ ಮತ್ತು ಲಕ್ಷ್ಮಣರಾವ್

ಲಕ್ಷ್ಮಣರಾವ್ ಅವರಿಗೆ ಕಾವ್ಯದ ಜೊತೆಗೆ ಸಂಗೀತದಲ್ಲಿ ಅಪಾರವಾದ ಆಸಕ್ತಿ ಇತ್ತು. ಇದು ಚಿಕ್ಕಂದಿನಿಂದಲೇ ಅಪ್ಪನಿಂದ ವಂಶಪಾರಂಪರ್ಯವಾಗಿ ಬಂದಿತ್ತು. ಇವರ ತಂದೆಯವರು ಚೆನ್ನಾಗಿ ಹಾಡುತ್ತಿದ್ದರು ಜೊತೆಗೆ ಪಿಟೀಲು ನುಡಿಸುತ್ತಿದ್ದರು. ಇವರ ತಂದೆ-ತಾಯಿ ಅಷ್ಟಾಗಿ ಓದಿರದಿದ್ದರೂ ಲಕ್ಷ್ಮಣರಾವ್ ಅವರಿಗೆ ಸಂಗೀತದ ಜೊತೆ ಸಾಹಿತ್ಯದಲ್ಲೂ ಅಪಾರವಾದ ಒಲವು ಮತ್ತು ಆಸಕ್ತಿ ಬೆಳೆಯಲು ಕಾರಣರಾದರು.

ಬಿ.ಆರ್. ಲಕ್ಷ್ಮಣರಾವ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಗುರುತಿಸಿಕೊಂಡಿರುವಂತೆಯೇ ಸುಗಮ ಸಂಗೀತ ಕ್ಷೇತ್ರದಲ್ಲಿಯೂ ಸಾಕಷ್ಟು ಕೃಷಿ ನಡೆಸಿದ್ದಾರೆ. ಮನೆಯಲ್ಲಿ ಸಂಗೀತದ ವಾತಾವರಣ ಸ್ವಲ್ಪ ಮಟ್ಟಿಗಿತ್ತು. ತಂದೆ ಪಿಟೀಲು ವಾದಕರಾಗಿದ್ದರು. ಲಕ್ಷ್ಮಣರಾವ್ ಅವರಿಗೆ ಚಿಕ್ಕಂದಿನಿಂದಲೂ ಹಾಡುವ ಅಭ್ಯಾಸವಿದ್ದು, ಕಾಲೇಜು ದಿನಗಳಲ್ಲಿ ತೆಲುಗು ಸಿನಿಮಾ ಗೀತೆಗಳನ್ನು ಹಾಡುವ ಮೂಲಕ ಬಹುಮಾನಗಳನ್ನು ಪಡೆದುಕೊಂಡಿದ್ದರು. ಅವರು ಹಾಡುತ್ತಿದ್ದ ಭಾವಗೀತೆಗಳ ಧ್ವನಿ ಸುರುಳಿಯ ಮೂಲಕವೇ ಹೆಚ್ಚಿನ ಜನರನ್ನು ತಲುಪಿರುವುದನ್ನು ಗುರುತಿಸಬಹುದು. ಹಾಗಾಗಿ ಅವರ ಗೀತೆಗಳು ಸುಗಮ ಸಂಗೀತ ಕ್ಷೇತ್ರದಲ್ಲಿ ಹೆಚ್ಚಿನ ಜನಪ್ರಿಯತೆ ಗಳಿಸಿವೆ ಹಾಗೂ ಬೇರೆ ಬೇರೆ ಗಾಯಕರು ಇವರ ಗೀತೆಗಳನ್ನು ಹಾಡಿದ್ದಾರೆ.

ಸಿ. ಅಶ್ವತ್ಥ್, ಮೈಸೂರು ಅನಂತಸ್ವಾಮಿ, ರತ್ನಮಾಲಾ ಪ್ರಕಾಶ್, ಉಪಾಸನ ಮೋಹನ್, ಪಂಚಮಿ ಹಳಿಬಂಡಿ, ಎಂ.ಡಿ. ಪಲ್ಲವಿ, ಸುಪ್ರಿಯಾ ಆಚಾರ್ಯ, ಪ್ರೇಮಲತಾ ದಿವಾಕರ್, ಪಿ.ಎಂ. ಮಂಗಳಾ, ಬಿ.ಜೆ. ಭಾರತಿ, ಶಿವಮೊಗ್ಗ ಸುಬ್ಬಣ್ಣ, ಬಿ.ಆರ್. ಛಾಯಾ, ವೈ.ಕೆ. ಮುದ್ದುಕೃಷ್ಣ, ಯಶವಂತ ಹಳಿಬಂಡಿ, ಶ್ರೀ ಅರವಿಂದ ಅಪೂರ್ವ, ಶ್ರೀಧರ್, ಅರ್ಚನಾ ಉಡುಪ ಇವರ ಗಾಯನದಲ್ಲಿ ಸುಬ್ಬಾಭಟ್ಟರ ಮಗಳೇ, ಆಲಿಂಗನ, ಪ್ರೇಮ, ನನ್ನವಳು, ಹೂ ನಗೆ, ಗೆಳೆಯರಿರಲಿ ಈ ಬಾಳಿನಲ್ಲಿ,

ಕೊಲ್ಲುವುದಾದರೆ ಕೊಂದು ಬಿಡು, ಹೇಳಿ ಹೋಗು ಕಾರಣ, ಹಾಡೇ ಮಾತಾಡೇ, ವಾಸಂತೀ, ದೇವವೀಣೆ, ಜೀವ, ಸ್ನೇಹ, ಇತ್ಯಾದಿ ಧ್ವನಿ ಸುರುಳಿಗಳನ್ನು ಹೊರ ತಂದಿದ್ದಾರೆ.

ಲಕ್ಷ್ಮಣರಾವ್ ಗೀತೆಗಳ ಜೊತೆಗೆ ಎಚ್.ಎಸ್. ವೆಂಕಟೇಶಮೂರ್ತಿ, ಸತ್ಯಾನಂದ ಪಾತ್ರೋಟ, ಡಾ. ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ ಇವರ ರಚನೆಗಳನ್ನು ಸಹ ಸೇರಿಸಿಕೊಂಡಿದ್ದಾರೆ. ನಾವಿರುವುದೇ ಹೀಗೆ ಎಂಬ ಕನ್ನಡ ಹಾಸ್ಯ ಗೀತೆಗಳ ಜೊತೆಗೆ ದುಂಡಿರಾಜ್ ಅವರ ಗೀತೆಗಳನ್ನು ಸೇರಿಸಿಕೊಂಡ ಧ್ವನಿಸುರುಳಿ ಹೊರಬಂದಿದೆ. ಮಕ್ಕಳ ಶೈಕ್ಷಣಿಕ ಗೀತೆಗಳಿಂದ ಕೂಡಿದ 'ಕಲಿಯೋಣ ಬನ್ನಿ' ಧ್ವನಿ ಸುರುಳಿಯು ಮಕ್ಕಳ ಭಾಷಾ ಬೆಳವಣಿಗೆಗೆ ಹಾಡಿನ ಮೂಲಕ ವಿವಿಧ ಪರಿಕಲ್ಪನೆಗಳನ್ನು ಮಕ್ಕಳಲ್ಲಿ ಬೆಳೆಸುವ ಆಶಯದಿಂದ ಹೊರ ಬಂದಿದೆ. ಇದು ಜಯಂತ ಕಾಯ್ಕಿಣಿ, ಎಚ್.ಎಸ್. ವೆಂಕಟೇಶಮೂರ್ತಿ ಅವರ ರಚನೆಗಳನ್ನು ಒಳಗೊಂಡಿದೆ. ಆಡಿ-ಹಾಡಿ ನಲಿಯುವ ಮೂಲಕ ಮಕ್ಕಳಲ್ಲಿ ವಿವಿಧ ಪರಿಕಲ್ಪನೆಗಳನ್ನು ಮೂಡಿಸುವುದಕ್ಕೆ ಇದು ಸಹಕಾರಿಯಾಗಿದೆ.

## 6. ಪ್ರಶಸ್ತಿಗಳು ಮತ್ತು ಗೌರವಗಳು

ತಮ್ಮ ಸಾಹಿತ್ಯ, ಬರಹ ಮತ್ತು ಮಾಧ್ಯಮಗಳ ಮೂಲಕ ಜನಪ್ರಿಯ ಕವಿಯೆಂದು ಗುರುತಿಸಿಕೊಂಡಿರುವ ಬಿ.ಆರ್. ಲಕ್ಷ್ಮಣರಾವ್ ಅವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. 1981 ರಲ್ಲಿ 'ಲಿಲ್ಲಿ ಪುಟ್ಟಿಯ ಹಂಬಲ' ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, 1998 ರಲ್ಲಿ 'ಎಡೆ' ಕವನ ಸಂಕಲನಕ್ಕೆ 'ಗೊರೂರು ಸಾಹಿತ್ಯ ಪ್ರಶಸ್ತಿ', 1998ರಲ್ಲಿ 'ಚುಟುಕು ರತ್ನ' ಪ್ರಶಸ್ತಿ ಲಭಿಸಿದೆ. 2008ರಲ್ಲಿ 'ಇವಳು ನದಿಯಲ್ಲ' ಕವನ ಸಂಕಲನಕ್ಕೆ ಡಾ. ಪು.ತಿ.ನ ಕಾವ್ಯ ಪುರಸ್ಕಾರ, 2013ರಲ್ಲಿ 'ಮಣಿಮಾಲೆ' ಪುಸ್ತಕಕ್ಕೆ ಅಮ್ಮ ಪ್ರಶಸ್ತಿ, 'ನನ್ನ ಮಟ್ಟಿಗೆ' ಕವನ ಸಂಕಲನಕ್ಕಾಗಿ ಅಕ್ಷರಲೋಕದ ನಕ್ಷತ್ರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಡಾ. ಮಾಸ್ತಿ ಪ್ರಶಸ್ತಿ, ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಆದರ್ಶ ಸಾಹಿತ್ಯ ರತ್ನ ಪ್ರಶಸ್ತಿ, 2025ರಲ್ಲಿ ಫಿಲ್ಮ್‌ಫೇರ್-2024, ಸಿಂಗಾರ ರತ್ನ, ಕನ್ನಡ ಕಾಯಕಶ್ರೀ, ಉದಯ ಕನ್ನಡಿಗ-2025, ರಾಷ್ಟ್ರಕವಿ ಕುವೆಂಪು ಪ್ರಶಸ್ತಿ-2025 ಹೀಗೆ ಹಲವಾರು ಸಂಘಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಬಿ.ಆರ್ ಲಕ್ಷ್ಮಣರಾವ್ ಅವರನ್ನು ಗೌರವಿಸಿವೆ.

## ಉಪಸಂಹಾರ

ಬಿ.ಆರ್. ಲಕ್ಷ್ಮಣರಾವ್ ಅವರು ಹೊಸಗನ್ನಡ ಕಾವ್ಯ ಪರಂಪರೆಯಲ್ಲಿ ಒಂದು ವಿಶಿಷ್ಟ ಕೊಂಡಿಯಾಗಿದ್ದಾರೆ. ಕಾವ್ಯವನ್ನು ಅತಿರೇಕದ ಬೌದ್ಧಿಕತೆಯಿಂದ ಮುಕ್ತಗೊಳಿಸಿ, ಅದಕ್ಕೆ ರಾಗ, ಲಯ, ಹಾಸ್ಯ ಮತ್ತು ಜನಸಾಮಾನ್ಯರ ಆಡುನುಡಿಯ ಸ್ಪರ್ಶ ನೀಡಿದ ಹೆಗ್ಗಳಿಕೆ ಇವರದ್ದಾಗಿದೆ. ಚಿಂತಾಮಣಿಯಂತಹ ಸಣ್ಣ ಪಟ್ಟಣದಲ್ಲಿದ್ದುಕೊಂಡು,

ಪ್ರೌಢಶಾಲಾ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಲೇ, ಇಡೀ ಕನ್ನಡ ಸಾಹಿತ್ಯ ಲೋಕವೇ ತಮ್ಮ ಕಡೆಗೆ ತಿರುಗಿ ನೋಡುವಂತೆ ಮಾಡಿದ ಇವರ ಸಾಧನೆ ಪ್ರಶಂಸನೀಯವಾದುದು. ಸಿ. ಅಶ್ವತ್ಥ್ ಅವರೊಂದಿಗಿನ ಒಡನಾಟದಿಂದ ಸುಗಮ ಸಂಗೀತ ಕ್ಷೇತ್ರದಲ್ಲಿ ಇವರು ಮೂಡಿಸಿದ ಕ್ರಾಂತಿ ಕನ್ನಡ ಸಾಂಸ್ಕೃತಿಕ ಇತಿಹಾಸದ ಸುವರ್ಣ ಪುಟವಾಗಿದೆ. ಕಾವ್ಯದ ಮೂಲಕ ಕನ್ನಡಿಗರ ಮುಖದಲ್ಲಿ ನಗು ಮೂಡಿಸುತ್ತಲೇ ಅಂತರಂಗವನ್ನು ಜಾಗೃತಗೊಳಿಸಿದ ಬಿ. ಆರ್. ಲಕ್ಷ್ಮಣರಾವ್ ಅವರ ಜೀವನ ಮತ್ತು ಸಾಹಿತ್ಯವು ಸಾಹಿತ್ಯ ಪ್ರೇಮಿಗಳಿಗೆ ಮತ್ತು ಸಹೃದಯರಿಗೆ ಪ್ರೇರಣಾದಾಯಕವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ವೆಂಕಟೇಶ್‌ಮೂರ್ತಿ ಎಚ್.ಎಸ್., ನರಹಳ್ಳಿ ಬಾಲಸುಬ್ರಹ್ಮಣ್ಯ ಮತ್ತು ಕಮಲ ಎಂ. ಆರ್., (2006), ಚಿಂತಾಮಣಿ, ಬೆಂಗಳೂರು: ಸಿ.ವಿ.ಜಿ. ಪಬ್ಲಿಕೇಷನ್ಸ್.
2. ಸತ್ಯನಾರಾಯಣ ಎಚ್.ಎಸ್. ಮತ್ತು ರಾಮನಾಥ್ ಎನ್., (2021), ಗೆಳೆಯ ಲಕ್ಷ್ಮಣ, ಬೆಂಗಳೂರು: ತೇಜು ಪಬ್ಲಿಕೇಷನ್ಸ್.